

# ವಿಭೂತಿಯ ಅನುಭೂತಿ!

ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನಲ್ಲಿ ಹಲವು ಜಲಪಾತಗಳಿವೆ. ಅವುಗಳಲ್ಲಿ ಅತ್ಯಂತ ಹೆಚ್ಚು ಪ್ರವಾಸಿಗರನ್ನು ಆಕರ್ಷಿಸುವುದು ವಿಭೂತಿ ಜಲಪಾತ. ಇದು ಅಂಕೋಲಾ ತಾಲ್ಲೂಕಿನ ಅಚವೆಯ ಹತ್ತಿರದ ಮಾಬಗಿಯಲ್ಲಿದೆ. ಕುಮಟಾ ತಾಲ್ಲೂಕಿನ ಯಾಣದ ಹತ್ತಿರದ ಗುಮ್ಮ್ಲಗದ್ದೆಯಲ್ಲಿ ಹುಟ್ಟಿ ಯಾಣದ ಮೂಲಕ ಅಚವೆ ಮಾರ್ಗವಾಗಿ ಹರಿದು, ಮಾಬಗಿಯಲ್ಲಿ ಧುಮುಕಿ ಬಳಿಕ ಗಂಗಾವಳಿ ನದಿಯನ್ನು ಸೇರುತ್ತದೆ.

ಯಾಣದಲ್ಲಿ ನೆಲೆ ನಿಂತಿರುವ ಭೈರವೇಶ್ವರ, ಶಿಖರದಿಂದ ಹೊರಬಂದು ಈ ವಿಭೂತಿಯಲ್ಲಿ ಮಿಂದು ಶುಚಿಯಾಗುತ್ತಾನೆ ಎನ್ನುವ ಐತಿಹ್ಯದ ಹಿನ್ನೆಲೆಯಲ್ಲಿ ಇದಕ್ಕೆ ವಿಭೂತಿ ಜಲಪಾತ ಎಂದು ಹೆಸರು ಬಂದಿದೆ. ಯಾಣದಿಂದ ಗಂಗಾವಳಿವರೆಗೆ ಹರಿಯುವ ಈ ಹೊಳೆಯಲ್ಲಿ ಎಲ್ಲಿ ಮಿಂದರೂ ಜನ್ಮ ಪಾವನವಾಗುತ್ತದೆ ಎಂಬುದು ಆಸ್ತಿಕರ ನಂಬಿಕೆ. ಈ ರಮಣೀಯ ತಾಣದಲ್ಲಿ ಹಲವು ಸಿನಿಮಾ ಚಿತ್ರೀಕರಣಗಳೂ ನಡೆದಿವೆ.

ಅಂಕೋಲಾದಿಂದ ಸುಮಾರು 45 ಕಿ.ಮೀ. ದೂರವಿರುವ ಈ ಜಲಪಾತಕ್ಕೆ ಕುಮಟಾ ಮಾರ್ಗದಲ್ಲಿ ಮಾದನಗೇರಿ ಮೂಲಕ ಬರಬಹುದು. ಮಾದನಗೇರಿಯಿಂದ 30 ಕಿ.ಮೀ. ಅಂಕೋಲಾ– ಹುಬ್ಬಳ್ಳಿ– ಅಂಕೋಲಾ ಮಾರ್ಗದಲ್ಲಿ ಹೆಬ್ಬುಳ್ (ಮಾಸ್ತಿಕಟ್ಟಾ ಹತ್ತಿರ) ಕ್ರಾಸ್‌ನಿಂದ 15 ಕಿ.ಮೀ. ಅಂತರದಲ್ಲಿದೆ. ಶಿರಸಿ ಮತ್ತು ಕುಮಟಾದಿಂದ ಯಾಣಕ್ಕೆ ಬಂದವರು ವಡ್ಡಿಯಿಂದ ಘಟ್ಟದಲ್ಲಿ ಕೆಳಗಿಳಿದರೆ ವಿಭೂತಿ ಜಲಪಾತ ಪ್ರತ್ಯಕ್ಷವಾಗುತ್ತದೆ.

ಜಲಪಾತವನ್ನು ವೀಕ್ಷಿಸಲು ಅಕ್ಟೋಬರ್‌ನಿಂದ ಮೇ ತಿಂಗಳವರೆಗಿನ ಅವಧಿ ಅತ್ಯುತ್ತಮ. ಸುತ್ತಮುತ್ತಲ ಹಸಿರು ಹೊದ್ದಿರುವ ಇಡೀ ಪ್ರದೇಶ ವಾರಾಂತ್ಯದ ಪ್ರವಾಸಿಗರಿಗೂ ರಮಣೀಯ ತಾಣ. ಜಲಪಾತದ ಮುಂದೆ ನಿಂತರೆ ಮನಸ್ಸನ್ನು ವಿಭಿನ್ನ ಅನುಭೂತಿಯೊಂದು ಆವರಿಸಿಕೊಳ್ಳುವುದು ಸುಳ್ಳಲ್ಲ.

★ ಚಿತ್ರ-ಬರಹ: ಫಾಲ್ಗುಣ ಗೌಡ ಅಚವೆ